ಕಾರಣ ಏಕಕಾಲಿಕ ಸಾಲ ತೀರುವಳಿ ಯೋಜನೆಗೆ ಅನುಮತಿಯನ್ನು ದಿನಾಂಕ: 01-03-2012 ರಂದು ನೀಡಿರುತ್ತದೆ.

ಹಾವೇರಿ ಜಿಲ್ಲೆಯ ಶಿಗ್ಗಾಂವ ಪಿಕಾರ್ಡ್ ಬ್ಯಾಂಕ್ ಮತ್ತು ಹಿರೇಕೆರೂರು ಪಿಕಾರ್ಡ್ ಬ್ಯಾಂಕ್‌ಗಳಿಗೆ ಅವುಗಳ ಸ್ವಂತ ಬಂಡವಾಳ ಯೋಜನೆಯ ಸಾಲಗಳಿಗೆ ಶೇಕಡ 5 ರಂತೆ ಬಡ್ಡಿಯನ್ನು ಸುಸ್ತಿ ಸಾಲಗಾರರಿಂದ ವಸೂಲಿ ಮಾಡಲು ಷರತ್ತಿಗೊಳಪಟ್ಟು ಕ್ರಮವಾಗಿ ದಿನಾಂಕ: 22-06-2012 ಹಾಗೂ ದಿನಾಂಕ: 17-08-2012 ರಂದು ಏಕಕಾಲಿಕ ಸಾಲ ತೀರುವಳಿ ಯೋಜನೆಗೆ ಅನುಮತಿ ನೀಡಲಾಗಿದೆ.

ಬಡ್ಡಿಯ ವ್ಯತ್ಯಾಸದ ಸಹಾಯಧನ

609 (642) ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು ಶೇಕಡ 3 ಮತ್ತು 1ರ ಬಡ್ಡಿ ದರದಲ್ಲಿ ನೀಡಿದ ಸಾಲಗಳ ಪೈಕಿ ವಸೂಲಾಗಿರುವ ಸಾಲಗಳ ಬಡ್ಡಿಯ ವ್ಯತ್ಯಾಸದ ಸಹಾಯಧನವನ್ನು ಸರಕಾರವು 2010-11 ಮತ್ತು 2011-12ರ ಸಾಲಿನಲ್ಲಿ ಬ್ಯಾಂಕುಗಳಿಗೆ ಎಷ್ಟು ಮೊತ್ತವನ್ನು ಬಿಡುಗಡೆ ಮಾಡಬೇಕಾಗಿತ್ತು;

ಆ) ಈವರೆಗೆ ಎಷ್ಟು ಮೊತ್ತವನ್ನು ಬಿಡುಗಡೆ ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು);

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು) :

ಅ) 2010-11ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ರೂ.412.24 ಕೋಟಿಗಳನ್ನು ಬಿಡುಗಡೆ ಮಾಡಬೇಕಿತ್ತು.

2011-12ನೇ ಸಾಲಿನಲ್ಲಿ ರೂ.598.07 ಕೋಟಿಗಳನ್ನು ಬಿಡುಗಡೆ ಮಾಡಬೇಕಿತ್ತು.

ಆ) ಈ ಮೊತ್ತದಲ್ಲಿ ರೂ.847.24 ಕೋಟಿಗಳನ್ನು 2010-11 ಮತ್ತು 2011-12 ನೇ ಸಾಲಿನಲ್ಲಿ ಬಿಡುಗಡೆ ಮಾಡಿದೆ. ಬಾಕಿ ಉಳಿದ ರೂ. 163.07 ಕೋಟಿಗಳನ್ನು 2012-13ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ. ಮೇಲಿನ 2 ವರ್ಷಗಳಿಗೆ ಸಂಬಂಧಿಸಿದಂತೆ ಬಿಡುಗಡೆ ಮಾಡಬೇಕಾದ ಮೊತ್ತವನ್ನು ಈವರೆಗೆ ಪೂರ್ಣವಾಗಿ ಬಿಡುಗಡೆ ಮಾಡಿರುವುದರಿಂದ ಈ 2 ಸಾಲುಗಳಿಗೆ

ಸಂಬಂಧಿಸಿದಂತೆ ಸಹಕಾರ ಸಂಸ್ಥೆಗಳಿಗೆ ಪಾವತಿಸಲು ಯಾವುದೇ ಮೊತ್ತ ಬಾಕಿ ಇರುವುದಿಲ್ಲ.

ಬಿಡುಗಡೆ ಮಾಡಿದ ಮೊತ್ತವನ್ನು ಡಿಸಿಸಿ ಬ್ಯಾಂಕುವಾರು ಬಿಡುಗಡೆ ಮಾಡಿರುವುದರಿಂದ ರೂ. 163.07 ಕೋಟಿಗಳ ಬಿಡುಗಡೆ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ವಸಂತಬಂಗೇರ ಕೆ., (ಬೆಳ್ತಂಗಡಿ) ಇವರ ಪ್ರಶ್ನೆ ಸಂಖ್ಯೆ 642 ಕ್ಕೆ ಸಲ್ಲಿಸಲಾದ ಉತ್ತರ

ಅನುಬಂಧ

2011–12 ಕ್ಕೆ ಬಿಡುಗಡೆಗೆ ಬಾಕಿ ಇದ್ದ ಬಡ್ತಿ ಸಹಾಯಧನದ ಬಿಲ್ಲುಗಳನ್ನು 2012–13ನೇ ಸಾಲಿನಲ್ಲಿ ಜಿಲ್ಲಾವಾರು ಬಿಡುಗಡೆ ಮಾಡಿದ ವಿವರ

(ರೂ. ಕೋಟಿಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಬಿಡುಗಡೆ ಮಾಡಿದ ಬಡ್ತಿ ಸಹಾಯಧನ
1	ಬಾಗಲಕೋಟೆ	13.95
2	ಬೆಂಗಳೂರು ನಗರ, ಗ್ರಾಮಾಂತರ ರಾಮನಗರ	5.46
3	ಬೆಳಗಾವಿ	13.69
4	ಬಳ್ಳಾರಿ	4.17
5	ಬೀದರ್	3.70
6	ವಿಜಾಪುರ	14.06
7	ಚಿತ್ರದುರ್ಗ	1.81
8	ದಾವಣಗೆರೆ	5.07
9	ಧಾರವಾಡ, ಹಾವೇರಿ & ಗದಗ	5.08
10	ಗುಲ್ಬರ್ಗಾ & ಯಾದಗಿರಿ	2.36
11	ಹಾಸನ	6.98
12	ಕೋಲಾರ & ಚಿಕ್ಕಬಳ್ಳಾಪುರ	0.83
13	ಕೊಡಗು	8.85

14	ಚಿಕ್ಕಮಗಳೂರು	5.44
15	ಮಂಡ್ಯ	6.41
16	ಉತ್ತರ ಕನ್ನಡ	5.28
17	ರಾಯಚೂರು & ಕೊಪ್ಪಳ	4.09
18	ಶಿವಮೊಗ್ಗ	2.14
19	ದಕ್ಷಿಣ ಕನ್ನಡ ಮತ್ತು ಉಡುಪಿ	28.50
20	ಮೈಸೂರು & ಚಾಮರಾಜನಗರ	3.03
21	ತುಮಕೂರು	4.84
	ಒಟ್ಟು	**145.71**
	ಕಸ್ಕಾರ್ಡ್ ಬ್ಯಾಂಕ್ ಮತ್ತು ಇತರೇ ಸಂಘಗಳು	**17.36**
	ಒಟ್ಟು	**163.07**

ದೇವಸ್ಥಾನಗಳ ಕಾಮಗಾರಿಗಳು

497 (643) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಮುಜರಾಯಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮುಜರಾಯಿ ಇಲಾಖೆಯಿಂದ 2009–10, 2010–11 ಮತ್ತು 2011–12 ರಲ್ಲಿ ನಿಗದಿಪಡಿಸಿದ ಅನುದಾನ ಎಷ್ಟು (ವಿವರ ನೀಡುವುದು);

ಆ) ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕಿಗೆ ಈ 3 ವರ್ಷದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಯಾವ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು);

ಇ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು);